ಶ್ರೀ ವೀರೇಂದ್ರ ಪಾಟೀಲ್.—ಗೋದಾವರಿ ವಿಚಾರದಲ್ಲಿ ಆ ಪ್ರಶ್ನೆ ಬರುವುದಿಲ್ಲ. ಅದರಲ್ಲಿ ಬೇಕಾದಷ್ಟು ನೀರಿದೆ, ಡೈವರ್‌ಷನ್ ಯೋಜನೆ ಬೇರೆ ಇದೆ. ಕೃಷ್ಣಾ ಬೇಸಿನ್‌ಗೆ ಗೋದಾವರಿಯ ನೀರನ್ನು ಡೈವರ್ಟ್ ಮಾಡಬೇಕೆಂದಿರುವುದರಿಂದ ಗೋದಾವರಿಯಲ್ಲಿ ಉಪಯೋಗಿಸಲು ಸಾಕಾದಷ್ಟು ನೀರಿದೆ ಎಂದು ಅರ್ಥವಾಗುತ್ತದೆ. ಗೋದಾವರಿ ನೀರಿನ ಬಗ್ಗೆ ನಮ್ಮ ಡಿಮ್ಯಾಂಡ್ ಇರುವುದು ಕೇವಲ 24 ಟಿ.ಎಂ.ಸಿ.ಎಫ್. ಟಿ.ಗೆ ಮಾತ್ರ. ಈಗಾಗಲೇ ಸುಮಾರು 18—19 ಟಿ.ಎಂ.ಸಿ.ಎಫ್.ಟಿ. ಸಲುವಾಗಿ ಪ್ರಾಜೆಕ್ಟ್ ವರದಿ ತಯಾರಿಸುತ್ತಿದ್ದೇವೆ.

Sri V. N. PATIL.— Is the demand that we have made based on the extent of our right for waters or on the purse that we have ?

Sri VEERENDRA PATIL.— When we make a demand we make the demand depending upon the capacity to utilize the water. We must have area to utilize that water. What is the use of making demand if we do not have sufficient area to utilize that water ?

Plying of Bus to Kuradi

*Q.—600. Smt. NAGAMMA SESHAPPA (Kalmala).—

Will the Minister for Transport and Tourism be pleased to state:—

(*a*) whether it is a fact that there is a population of 8,000 in Kuradi Village, Manvi Taluk ;

(*b*) whether they are aware that there is a distance of 3½ Miles between Raichur-Manvi Road and Kuradi and also there is a necessity of a bus to ply up to Kuradi both in the morning as well as in the evening ;

(*c*) the reason for not making the said arrangements so far ?

*A.—Sri H. C. BORAIAH (Deputy Minister for Transport).—

(*a*) The population of Kuradi Village is about 6,000.

(*b*) Kuradi Village is situated about 4 miles (6.4 kms.) away from the Raichur-Manvi Road. There appears to be a need to operate a service.

(*c*) This is a fair weather road and not motorable during the monsoon.

ಶ್ರೀಮತಿ ನಾಗಮ್ಮ ಶೇಶಪ್ಪ.—ಮಾನ್ವಿ ತಾಲ್ಲೂಕು ಕುರಡಿ ಗ್ರಾಮದಲ್ಲಿ 8 ಸಾವಿರ ಜನಸಂಖ್ಯೆ ಇರುವುದು ನಿಜವೇ ?

ಶ್ರೀ ಎಚ್. ಸಿ. ಬೋರಯ್ಯ.—6 ಸಾವಿರ ಜನಸಂಖ್ಯೆ ಇದೆ ಎಂದು ಹೇಳಿದ್ದೇನೆ.

ಶ್ರೀಮತಿ ನಾಗಮ್ಮ ಶೇಶಪ್ಪ.—ಮಾನ್ವಿ ರಸ್ತೆಯಿಂದ ಸುಮಾರು ಮೂರೂವರೆ ಮೈಲಿ ದೂರ ದಲ್ಲಿದ್ದು, ಬೆಳಿಗ್ಗೆ ಸಾಯಂಕಾಲ ಒಂದೊಂದು ಬಸ್ಸ್‌ನ್ನು ಕುರಡಿವರೆಗೂ ಓಡಿಸುವ ಅವಶ್ಯಕತೆ ಇರುವುದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಗಮನಕ್ಕೆ ಬಂದಿದೆ, ಈಗಿರತಕ್ಕದ್ದು ಕಚ್ಚಾ ರಸ್ತೆಯಾಗಿರುವುದರಿಂದ ಮಳೆಗಾಲದಲ್ಲಿ ಓಡಿಸುವುದಕ್ಕೆ ಆಗುವುದಿಲ್ಲ, ಅನುಕೂಲವಾದ ವಾತಾವರಣದಲ್ಲಿ ಓಡಿಸುವುದಕ್ಕೆ ಸಾಧ್ಯ, ಈ ಸಾರಿ ಮಳೆಗಾಲವಾದ ಮೇರೆ ಬಸ್ಸನ್ನು ಓಡಿಸುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀಮತಿ ನಾಗಮ್ಮ ಶೇಶಪ್ಪ.—ಆ ಲೈನ್‌ನಲ್ಲಿ ಕಚ್ಚಾ ರಸ್ತೆ ಇರುವುದನ್ನು ಪಕ್ಕಾ ರಸ್ತೆಮಾಡಿ ಆದಷ್ಟು ಬೇಗ ಬಸ್ಸು ಓಡಾಡುವಂತೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಸಿ. ಬೋರಯ್ಯ.—ಆಗಬಹುದು, ಈಗ ಲೋಕೋಪಯೋಗಿ ಇರಾಖೆಯವರು ಅದನ್ನು ದುರಸ್ತು ಮಾಡುತ್ತಾ ಇದ್ದಾರೆ.

ಶ್ರೀ ಎಂ. ನಾಗಪ್ಪ.—ಮಳೆಗಾಲ ಇಲ್ಲದ ಸಮಯದಲ್ಲಾದರೂ ಅಲ್ಲಿಗೆ ಬಸ್ಸು ನಡೆಸಲಕ್ಕೆ ಅನುಕೂಲಮಾಡಿ ಕೊಡುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಮಳೆಗಾಲ ಆದಮೇಲೆ ಮಾತ್ರ ಸಾಧ್ಯವಾಗಬಹುದು.

ಶ್ರೀ ಸದಾಶಿವಪ್ಪ ಪಾಟೀಲ್.—ಈಗ ಗುಲ್ಬರ್ಗಾ ಡಿವಿಜನ್‌ನಲ್ಲಿ ಸಾರಿಗೆ ಸಂಪರ್ಕದ ಬಗ್ಗೆ ತುಂಬಾ ತೊಂದರೆಯಾಗಿರುವುದು ಗೊತ್ತೆ ?

ಶ್ರೀ ಎಚ್. ಸಿ. ಬೋರಯ್ಯ.—ಗೊತ್ತಿದೆ.

ಶ್ರೀ ಸದಾಶಿವಪ್ಪ ಪಾಟೀಲ್.—ಆದಷ್ಟು ಜಾಗ್ರತೆ ಆ ತೊಂದರೆಯನ್ನು ನಿವಾರಣೆ ಮಾಡುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ರಸ್ತೆಗಳನ್ನು ಮಾಡಿಸುವ ಬಗ್ಗೆ ತಾವು ಎಷ್ಟು ಜಾಗ್ರತೆ ಆಸಕ್ತಿ ವಹಿಸಿ ಮಾಡಿಸುತ್ತೀರೋ ಅಷ್ಟು ಜಾಗ್ರತೆ ಬಸ್ಸುಗಳನ್ನು ಹಾಕಿಸುತ್ತೇವೆ.

Gundala Project, Hyderabad.

*Q.—657. Sri M. NAGAPPA (Raichur).—

Will the Minister for Public Works be pleased to state :—

(*a*) whether the State Government is aware that Andhra Pradesh Government has started the Survey of Gundala Project, Hyderabad ;

(*b*) if so, whether the State Government has consented for the said Project ;

(*c*) the number of villages in Raichur District that would be submerged under the said project ;

(*d*) the steps taken by the Government for rehabilitation of those villages ?

A.—Sri VEERENDRA PATIL (Minister for Public Works).—

(*a*) Yes.

(*b*) No. It is under examination.

(*c*) Ten.

(*d*) Does not arise in view of reply at (*b*).

ಶ್ರೀ ಎಂ. ನಾಗಪ್ಪ.—ಈ ಪ್ರಾಜೆಕ್ಟ್‌ನ್ನು ಕಟ್ಟುವುದರಿಂದ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗೆ ಏನಾದರೂ ಅಫೆಕ್ಟ್ ಆಗುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಅಫೆಕ್ಟ್ ಆಗುವುದಿಲ್ಲ. ಆದರೆ ರಾಯಚೂರು ಜಿಲ್ಲೆಯಲ್ಲಿ ಕೆಲವು ಹಳ್ಳಿಗಳು ಮುಳುಗಡೆಯಾಗುತ್ತವೆ.

ಶ್ರೀ ಎಂ. ನಾಗಪ್ಪ.—ಯಾವ ಯಾವ ಹಳ್ಳಿಗಳು ಮುಳುಗಡೆಯಾಗುತ್ತವೆ ಎಂಬುದನ್ನು ಹೇಳುತ್ತೀರಾ ?